ವಾಸು ಅವರ ಮನೆಯ ಬಾಗಿಲು ತಟ್ಟಿದ. ಹಿಂದೆಂದೂ ಅವನು ಅಂಥ ಅವೇಳೆಯಲ್ಲಿ ಅವರ ಮನೆಗೆ ಹೋಗಿರಲಿಲ್ಲ. ಬಾಗಿಲು ತೆರೆದ ಮುದುಕಿಗೆ ಅದೊಂದು ಅಮಂಗಲದ ಮನ್ಸೂಚನೆಯಂತಿತ್ತು.

'ಅಜ್ಜೀ, ಶಾಲಾ ಡೆಪ್ಯುಟಿ ಇನ್‌ಸ್ಪೆಕ್ಟರರು ಹರಿಹರಪುರದ ಪೊಲೀಸ್ ಸ್ಟೇಷನ್ನಿನಲ್ಲಿ ಉಳಿದುಕೊಂಡು ವಿದ್ಯಾರ್ಥಿಗಳಿಗೆ ಮೌಖಿಕ ಪರೀಕ್ಷೆ ನಡೆಸುತ್ತಾರೆ. ಈ ಸುದ್ದಿ ಎಲ್ಲ ಶಾಲೆಗಳಿಗೂ ಹೋಗಿದೆ. ನನಗೂ ಇವತ್ತು ಆರ್ಡರು ಬಂತು. ನಾಳೆ ಬೆಳಗ್ಗೆ ನಾನು ಹೋಗಬೇಕು; ಐದು ದಿನ ಇರುವುದಿಲ್ಲ' ಎಂದು ಹೇಳಿದ ವಾಸು.

ಬಾಗಿಲ ಹಿಂಬದಿಯಿಂದ ಈ ಮಾತುಗಳನ್ನು ಕೇಳಿಸಿಕೊಂಡ ರೇವತಿಗೆ ಕಾಲು ಸೋತು ಬಂದಂತಾಯಿತು. ಕೆಳಕ್ಕೆ ಬೀಳದಂತಿರಲು ಅವಳು ಬಾಗಿಲನ್ನೇನೂ ಬಿಗಿಯಾಗಿ ಹಿಡಿದುಕೊಂಡಿರಲಿಲ್ಲ.

ವಾಸು ಅವರಿಗೆ ಐದು ದಿನಗಳಿಗಾಗುವಷ್ಟು ಅಕ್ಕಿ, ಎಣ್ಣೆ, ಉಪ್ಪು, ತರಕಾರಿ ತಂದುಕೊಟ್ಟವನು ಅವರಿಂದ ಬೀಳ್ಕೊಂಡ.

'ಮಗೂ, ಬಿಸಿಲಲ್ಲಿ ತುಂಬಾ ಹೊತ್ತು ಓಡಾಡಬೇಡ. ಹುಶಾರು. ಹೊತ್ತಿಗೆ ಸರಿಯಾಗಿ ಊಟಮಾಡು' ಎಂದು ಹೇಳಿದಳು ಮುದುಕಿ, ನಿಟ್ಟುಸಿರಿಡುತ್ತಾ.

ರೇವತಿಗೆ ಅವನಿಂದ ಕಣ್ಣು ಕೀಳಲಾಗಲಿಲ್ಲ. ಹಿಂದೆಲ್ಲ ಅವರ ಕಣ್ಣುಗಳು ಸಂಧಿಸಿದ್ದೇ ಅವಳು ಮುಖವನ್ನು ಬೇರೆ ಕಡೆ ತಿರುಗಿಸಿಕೊಳ್ಳುತ್ತಿದ್ದಳು. ಆದರೆ, ಇವತ್ತು ಯಾವುದೇ ಸಂಕೋಚವಿಲ್ಲದೆ, ಕಣ್ಣು ಮಿಟುಕಿಸದೆ ಅವನನ್ನೇ ನೋಡಿದಳು. ವಾಸುವಿನಲ್ಲೂ ಏನೋ ಬದಲಾವಣೆಯಾದಂತಿತ್ತು. ಎಷ್ಟೋ ದಿನಗಳವರೆಗೆ ಅವಳನ್ನು ಕದ್ದು ಮುಚ್ಚಿ ನೋಡುತ್ತಿದ್ದವನು ಇವತ್ತು ತನ್ನ ಮುಖವನ್ನು ಬೇರೆ ಕಡೆ ತಿರುಗಿಸಲಿಲ್ಲ. ಇಬ್ಬರೂ ಪರಸ್ಪರ ದಿಟ್ಟಿಸಿ ನೋಡಿದರು.

ಸಾಯಂಕಾಲವಾಯಿತು. ಕತ್ತಲು ಮನೆಯನ್ನು ತುಂಬಿಕೊಂಡಿತು, ಇಡೀ ಭೂಮಿಯನ್ನು ಆವರಿಸಿತು. ರೇವತಿಯು ಅವಳ ಅಜ್ಜಿ ಎದೆಯಿರಿಯುವಂತೆ ಕಿರಿಚಿಕೊಳ್ಳುವವರೆಗೂ ನೆಲದಲ್ಲಿ ಬೇರುಬಿಟ್ಟವಳಂತೆ ನಿಂತೇ ಇದ್ದಳು. ವಾಸು ಆಗಲೇ ಹೊರಟುಹೋಗಿದ್ದ.

ರೇವತಿ ದಿನಗಳನ್ನು ಎಣಿಸುತ್ತಿದ್ದಳು.

ಆರನೆಯ ದಿನ ತನ್ನ ತಂದೆ ತಾಯಿ ಸತ್ತಮೇಲೆ ತಾನು ಯಾವ ಮುಂಬಾಗಿಲನ್ನು ದೂರಮಾಡಿದ್ದಳೋ ಆ ಮುಂಬಾಗಿಲಿಗೆ ಏಳೆಂಟು ಸಲ ಹೋಗಿ ನೋಡಿದಳು. ಶಾಲೆಯ ಹುಡುಗರು ವಾಸುವಿನ ಸಾವಿನ ಸುದ್ದಿ ಹೊತ್ತುಕೊಂಡು ಹರಿಹರಪುರಕ್ಕೆ ಹಿಂತಿರುಗುವ ಹೊತ್ತಿಗೆ ಆರು ಗಂಟೆ ಕಳೆದಿತ್ತು. ವಾಸು ಹಿಂತಿರುಗಿ ಬರುತ್ತಿರುವಾಗ ಗೋಪಾಲಪುರದ ಬಳಿ ಒಂದು ದೊಡ್ಡ ಆಲದಮರದ ಕೆಳಗೆ ಕಾಲರಾಕ್ಕೆ ಬಲಿಯಾಗಿದ್ದ. ಹಳ್ಳಿಯ ಮಂದಿ ದುಃಖಿಸಿದರು; ಹೆಂಗಸರು ಮಕ್ಕಳು ಕಣ್ಣೀರು ಸುರಿಸಿದರು. 'ಎಷ್ಟು ಚಂದದ ಹುಡುಗ!' ಎಂದೊಬ್ಬರು ಅಂದರೆ, 'ಎಷ್ಟು ಮೃದು. ಒಂದು ನೊಣವನ್ನು ಕೂಡ ಹಿಂಸಿಸಲಿಲ್ಲ' ಎಂದರು ಇನ್ನೊಬ್ಬರು.

ಅಜ್ಜಿ ಎಷ್ಟೆಲ್ಲ ಅತ್ತಳೆಂದರೆ ಆಕೆಗೆ ಸೆರೆಯುಬ್ಬಿಬಂತು. ಬಿಕ್ಕಿ ಬಿಕ್ಕಿ ಅಳುತ್ತ ಮಧ್ಯೆ ಮಧ್ಯೆ 'ಪಾಪದ ಹುಡುಗ' ಎನ್ನುತ್ತಾ, 'ನಿನ್ನಿಂದಲೇ ಅವನಿಗಂಥ ಗತಿ ಬಂತು' ಎಂದುಬಿಟ್ಟಳು – ರೇವತಿಗೆ ಕಲಿಸಬಯಸಿದ್ದರಿಂದಲೇ ಅವನು ಆ ಎಳೆ ವಯಸ್ಸಿನಲ್ಲಿ ಅಸುನೀಗಬೇಕಾಯಿತು ಎಂದು ಸೂಚಿಸುವಂತೆ.

ನೆಲಕ್ಕೆ ಕುಸಿದ ರೇವತಿ, ಏನೂ ಸದ್ದಿಲ್ಲದೆ ಅಲ್ಲೇ ಬಿದ್ದಿದ್ದಳು.

ಮರುದಿನ ಬೆಳಗ್ಗೆ ಎಚ್ಚರಗೊಂಡ ಅಜ್ಜಿ ತನ್ನ ಪಕ್ಕ ರೇವತಿಯಿಲ್ಲವೆಂದು ತಿಳಿದದ್ದೇ, 'ರೇವತಿ! ರೇವಿ! ಎಲ್ಲಿ ಹೋದೆಯೇ ಹಾಳಾದವಳೇ' ಎಂದು ಸಿಟ್ಟಿನಿಂದ ಕೂಗಿಕೊಂಡಳು. ಕೂಗಿಕೊಂಡು ಕೂಗಿಕೊಂಡು ಅವಳ ಬಾಯಿಯ ಅಂಚಿನಲ್ಲಿ ನೊರೆಗಟ್ಟಿತು. ಬೀದಿಯಲ್ಲಿ ತಿರುಗಾಡುವವರು ಬೆಳಗ್ಗೆಯಿಡೀ ಅವಳ